**ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ**

**ಸಿ.ಸಿ.ನಂ.932/2022**

ಅಸಾಃ 6(ಚಾಸಾ-12)

| | |
|---|---|
| ಹೆಸರು | ಸಿದ್ದಪ್ಪ ಹಿರೇಕುರಬರ |
| ತಂದೆಯ /ಗಂಡನ ಹೆಸರು | ಬಲವಂತಪ್ಪ |
| ವಯಸ್ಸು | 62 ವರ್ಷ |
| ಉದ್ಯೋಗ | ನಿವೃತ್ತ ಪಿ ಎಸ್ ಐ |
| ವಾಸಸ್ಥಳ | ಮುದ್ದೇಬಿಹಾಳ |

ದಿನಾಂಕ 01-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನಾನು 2017 ರಿಂದ 2023 ವರೆಗೆ ನಾನು ಎ ಎಸ್ ಐ ಅಂತಾ ಮಹಾಲಿಂಗಪೂರ ಪೋ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ .

ದಿಃ 23-10-2021 ರಂದು ನಾನು ಠಾಣೆ ಕರ್ತವ್ಯದಲ್ಲಿ ಇದ್ದಾಗ ರಾತ್ರಿ 08-45 ಗಂಟೆಗೆ ಚಾಸಾ-1 ರವರು ನೀಡಿದ ಲಿಖಿತ ದೂರನ್ನು ಸ್ವೀಕರಿಸಿಕೊಂಡು ನಮ್ಮ ಠಾಣಾ ಗುನ್ನೆ ನಂಬರ 107/2021 ರಂತೆ ಪ್ರಕರಣವನ್ನು ದಾಖಲಸಿಕೊಂಡು ಪ್ರ ವ ವ ವನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಮತ್ತು ನನ್ನ ಮೇಲಾಧಿಕಾರಿಗಳಿಗೆ ಕಳಿಸಿರುತ್ತೇನೆ.

ದಿನಾಂಕ 24-10-2021 ರಂದು ಚಾಸಾ-6 ರವರು ತೋರಿಸಿದ ಸ್ಥಳದಲ್ಲಿ ಚಾಸಾ- 2 ಮತ್ತು 3 ರವರ ಸಮಕ್ಷಮ ಸ್ಥಳ ಪಂಚನಾಮೆವನ್ನು ಬೆಳಿಗ್ಗೆ 09-00 ರಿಂದ 10-00 ಗಂಟೆ ವರೆಗೆ ಮಾಡಿ ಕಚ್ಚಾ ನಕಾಶೆ ತಯಾರಿಸಿ ಫೋಟೋಗಳನ್ನು ತೆಗೆಸಿರುತ್ತೇನೆ. ನಂತರ ಅದೇ ದಿನ ಬೆಳಿಗ್ಗೆ 10-30 ರಿಂದ 11-30 ರ ವರೆಗೆ ಮಹಾಲಿಂಗಪೂರ ಪೋಲಿಸ ಠಾಣಾ ಆವರಣದಲ್ಲಿ ಅಪಘಾತ ಪಡಿಸಿದ ಎರಡೂ ವಾಹನಗಳನ್ನು ಚಾಸಾ-2 ಮತ್ತು 3 ರವರ ಸಮಕ್ಷಮ ವಾಹನ ತಡೆ ಪಂಚನಾಮೆಯನ್ನು ಮಾಡಿರುತ್ತೇನೆ. ಅದೇ ದಿನ ಸಾಕ್ಷಿದಾರರಾದ ಚಾಸಾ- 4 ರಿಂದ ಚಾಸಾ- 8 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ನಂತರ ಅಪಘಾತ ಪಡಿಸಿದ ವಾಹನಗಳ ಯಾಂತ್ರೀಕ ಪರೀಕ್ಷೆ ಕುರಿತು ಚಾಸಾ-9 ರವರಿಗೆ ಪತ್ರದ ಮೂಲಕ ನಿವೇದಿಸಿಕೊಂಡಿರುತ್ತೇನೆ. ಅಪಘಾತ ಪಡಿಸಿದ ವಾಹನಗಳ ಆರ್ ಸಿ ಮಾಲೀಕರಿಗೆ ಮೋಟಾರ ವಾಹನ ಕಾಯಿದೆ ಕಲಂ 133 ಅಡಿಯಲ್ಲಿ ನೋಟಿಸ ಜಾರಿ ಮಾಡಿ ಹಿಂಬರಹವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ 1 ನೇ ಆರೋಪಿ ಠಾಣೆಗೆ ಹಾಜರಾಗಿದ್ದು ಅತನನ್ನು ವಿಚಾರಣೆ ಮಾಡಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿನಾಂಕ 25-10-2021 ರಂದು ಆತನಿಂದ ಸೂಕ್ತ ಮುಚ್ಚಳಿಕೆ ಪತ್ರ ಪಡೆದುಕೊಂಡು ವಾಹನವನ್ನು ಬಿಡುಗಡೆ ಮಾಡಿ ಫೋಟೋಗಳನ್ನು ತೆಗೆಸಿರುತ್ತೇನೆ. ದಿನಾಂಕ 27-11-2021 ರಂದು ಚಾಸಾ-9 ರವರಿಂದ ವಾಹನದ ಪರೀಕ್ಷಾ ವರದಿ ಬಂದಿದ್ದು ಅದನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-10 ರವರಿಂದ ಚಾಸಾ-4 ರವರ ಗಾಯದ ಪ್ರಮಾಣ ಪತ್ರ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ತನಿಖೆ ಪೂರ್ಣಗೊಂಡಿದ್ದು ಆರೋಪಿಯ ಮೇಲೆ ಆರೋಪ ಸಾಬಿತಾಗುವದು ಕಂಡು ಬಂದಿದ್ದರಿಂದ ದಿನಾಂಕ 27-11-2021 ರಂದು ಅತನ ಮೇಲೆ ಅಂತಿಮ ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಾನು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈ ಹಂತದಲ್ಲಿ ಆರೋಪಿ ನ್ಯಾಯಾಲಯದಲ್ಲಿ ಗೈರು ಹಾಜರು ಇದ್ದು ಆತನ ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ಆತನ ಪರ ವಕೀಲರು ಅರ್ಜಿ ಸಲ್ಲಿಸಿರುತ್ತಾರೆ.

ಈ ಹಂತದಲ್ಲಿ ಸಾಕ್ಷಿ ಫಿರ್ಯಾದಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-1 ಸಿ ಎಂದು ಗುರುತಿಸಲಾಯಿತು. ಸಾಕ್ಷಿ ಪ್ರ ವ ವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-10 ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ- 10 ಎ ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-2 ರಿಂದ 8 ರ ದಾಖಲಗಳನ್ನು ನೋಡಿ ಗುರುತಿಸಿದ್ದು ನಿಪಿ-2, 3 ಮತ್ತು 6 ರಲ್ಲಿರುವ ಸಾಕ್ಷಿ ಸಹಿಗಳನ್ನು ನಿಪಿ-2 ಬಿ, 3 ಬಿ, 6 ಬಿ ಎಂದು ಗುರುತಿಸಲಾಯಿತು. ವಾಹನಗಳ ಮಾಲೀಕರುಗಳಿಗೆ ಮೋಟಾರ ವಾಹನ ಕಾಯಿದೆ ಕಲಂ 133 ಅಡಿಯಲ್ಲಿ ನೀಡಿದ ನೋಟಿಸಗಳು ಮತ್ತು ಅವರಿಂದ ಪಡೆದ ಹಿಂಬರಹವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ- 11 ಮತ್ತು ನಿಪಿ- 12 ಎಂದು ಗುರುತಿಸಲಾಯಿತು. ಒಂದು ವಾಹನ ಬಿಡುಗಡೆ ಕಾಲಕ್ಕೆ ಪಡೆದ ಮುಚ್ಚಳಿಕೆ ಪ್ರಮಾಣ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-13 ಎಂದು ಗುರುತಿಸಲಾಯಿತು. ಚಾಸಾ-9 ರವರಿಂದ ಪಡೆದ ವಾಹನದ ಪರೀಕ್ಷಾ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-14 ಎಂದು ಗುರುತಿಸಲಾಯಿತು. ಚಾಸಾ-4 ರವರ ಗಾಯದ ಪ್ರಮಾಣ ಪತ್ರದ ಸ್ವೀಕೃತ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-15 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿಯ ಪರ ಶ್ರೀ ಎಸ್ ವಿ ಎಸ್ ವಕೀಲರಿಂದ-</u>**

ಅಪಘಾತ ನಡೆದಿದೆ ಎನ್ನಲಾದ ಸ್ಥಳದಲ್ಲಿ ಸಾಕಷ್ಟು ವಾಹನಗಳ ಸಂದಣಿ ಇರುತ್ತದೆ ಎಂದರೆ ಸರಿ. ಅದಕ್ಕಾಗಿ ವಾಹನಗಳು ನಿದಾನವಾಗಿ ಚಲಿಸಬೇಕಾಗುತ್ತದೆ ಎಂದರೆ ಸರಿ. 2 ನೇ ಆರೋಪಿ ತನ್ನ ಮೋಟಾರ ಸೈಕಲ ಮೇಲೆ ಅನುಮತಿಕ್ಕಿಂತ ಹೆಚ್ಚಿನ ಅಂದರೆ 03 ಜನ ಮತ್ತು ಒಂದು ಸಣ್ಣ ಮಗುವಿನೊಂದಿಗೆ ಹೊಗುತ್ತಿದ್ದರು ಎಂದರೆ ಸರಿ. ಆತನ ನಿಯಂತ್ರಣ ತಪ್ಪಿ ಆತನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಚಾಸಾ-4 ರವರಿಗೆ ಪರಿಹಾರ ಹಣ ಸಿಗಲಿ ಎಂದು ಚಾಸಾ-1 ರವರು ನೀಡಿದ ಸುಳ್ಳು ದೂರನ್ನು ಸ್ವೀಕರಿಸಿಕೊಂಡು ಸುಳ್ಳು ತನಿಖೆ ಮಾಡಿ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲಾ .**

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ. ಕೇ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ.